## ಪ್ರೀತಿಯಿಂದ ಎಲ್ಲರನ್ನೂ ಗೆಲ್ಲಬೇಕು

‘ಬದುಕ ಗೆಲ್ಲಿಸು ಮನವೇ’ (ಆ. 10, ನೇಮಿಚಂದ್ರ) ಲೇಖನವನ್ನು ಪ್ರತಿಯೊಬ್ಬರೂ ಓದಿ ಅರ್ಥೈಸಿಕೊಳ್ಳಬೇಕು. ಜೀವನ ಸುಖ ದುಃಖ, ಭರವಸೆ ನಿರಾಸೆಗಳಿಂದ ತುಂಬಿರುತ್ತದೆ. ಅದನ್ನು ಹೇಗೆ ನಿಭಾಯಿಸುವುದು ಎನ್ನುವುದು ಮುಖ್ಯ. ‘ನಕಾರಾತ್ಮಕ ವಿಷಯಗಳು, ವಿವರಗಳು ಗ್ರಾಫಿಕ್ ಆಗಿ ತಿಳಿಸಿದಷ್ಟೂ, ತೋರಿಸಿದಷ್ಟೂ ಅವು ನಮ್ಮ ಮನಸ್ಸಿನ ಮೇಲೆ ಪರಿಣಾಮ ಬೀರುತ್ತವೆ, ಚಿಂತೆಗೆ ಕಾರಣವಾಗುತ್ತವೆ’ ಎಂಬ ಲೇಖಕಿಯ ಮಾತು ಅರ್ಥಪೂರ್ಣ. ಆದರೆ ಸಾಮಾಜಿಕ ಜಾಲತಾಣಗಳು, ಟೀವಿ ಮಾಧ್ಯಮಗಳು ನಕಾರಾತ್ಮಕ ಸಂಗತಿಗಳಿಗೆ ಪ್ರಾಶಸ್ತ್ಯ ನೀಡಿರುವುದು ಬೇಸರದ ಸಂಗತಿ. ಎಲ್ಲರನ್ನೂ ಪ್ರೀತಿಯಿಂದ ಕಾಣುವ ಮನೋಭಾವ ಬೆಳೆಸಿಕೊಳ್ಳಬೇಕು ಮತ್ತು ಬೆಳೆಸಬೇಕು. ಅದೇ ಆದ್ಯ ಕರ್ತವ್ಯ.

—ತಿಮ್ಮರಾಜು ಎಸ್.ಆರ್., ದಾವಣಗೆರೆ




## ಬದುಕಿಗೆ ದಾರಿದೀಪ

‘ಬದುಕ ಗೆಲ್ಲಿಸು ಮನವೇ’ ಅದ್ಭುತ ಲೇಖನ. ಮಕ್ಕಳಿಂದ ಹಿಡಿದು ಹಿರಿಯರಿಗೂ ದಾರಿದೀಪವಾಗುವ ಸಾಲುಗಳು ಲೇಖನದಲ್ಲಿವೆ.

—ಯೋಗೀಶ ಹೆಗಡೆ, ಮುರ್ಡೇಶ್ವರ

## ಮನಮುಟ್ಟಿದ ಲೇಖನ

ನೇಮಿಚಂದ್ರ ಅವರ ಲೇಖನ ಮನಮುಟ್ಟಿತು. ನಮ್ಮ ಸುತ್ತಮುತ್ತಲಿರುವ ಅನೇಕ ಹಿರಿಯರು ಮನನೊಂದು ನರಳುತ್ತಾ ಸಾವು ಬರಬಾರದೇ ಎಂದು ಕೊರಗುವಾಗ ಅಯ್ಯೋ ಎನಿಸುತ್ತದೆ. ಎಲ್ಲರೂ ಹೊಂದಾಣಿಕೆಯಿಂದ ಬದುಕುವುದನ್ನು ರೂಢಿಸಿಕೊಂಡರೆ ಆಯುಷ್ಯ ಪೂರ್ತಿ ನೆಮ್ಮದಿಯ ಜೀವನ ನಡೆಸಬಹುದಲ್ಲವೇ?

—ಬಿ. ಶೋಭಾ ಅರಸ, ತೆಕ್ಕಟ್ಟೆ

## ಟೊಮ್ಯಾಟೊ ಹಾಸ್ಯದೌತಣ

‘ಟೊಮ್ಯಾಟೊ ಲೀಲೆಗಳು’ (ಆ. 10, ಸವಿತಾ ಮಾಧವ ಶಾಸ್ತ್ರಿ ಗುಂಡ್ಮಿ) ಮಂದಹಾಸ ಲೇಖನ ಹಾಸ್ಯದೌತಣ ಉಣಬಡಿಸಿತು. ಟೊಮ್ಯಾಟೊ ಬೆಲೆ ಏರಿಕೆಯ ಸುತ್ತ ಲೇಖನದಲ್ಲಿ ಪ್ರಸ್ತಾಪವಾದ ಸಂಗತಿಗಳನ್ನು ಓದಿ ನಗು ಬಂದಿತು.

—ರೇಣುಕಾ ಜಿ.ವಿ.

## ತರಕಾರಿಯೋ? ಹಣ್ಣೋ?



ಮಂದಹಾಸ ಬರಹ ಚೆನ್ನಾಗಿತ್ತು. ಇದೇ ಸಂದರ್ಭ, ಟೊಮ್ಯಾಟೊ ಬಗ್ಗೆ ಪ್ರಸಾರವಾದ ರೇಡಿಯೊ ಕಾರ್ಯಕ್ರಮವೊಂದು ಸ್ವಾರಸ್ಯಕರವೆನಿಸಿತು.

ಹಿಂದೊಮ್ಮೆ ಅಮೆರಿಕ ಸರ್ಕಾರ, ಆಮದಾಗುವ ತರಕಾರಿಗಳಿಗೆ ಸುಂಕ ವಿಧಿಸಿತ್ತಂತೆ. ಹಣ್ಣುಗಳಿಗೆ ಸುಂಕ ಇಲ್ಲ. ಟೊಮ್ಯಾಟೊ ಹಣ್ಣೋ, ತರಕಾರಿಯೋ ಎಂಬ ಬಗ್ಗೆ ಸುಂಕದ ಅಧಿಕಾರಿಗಳಿಗೆ ಗೊಂದಲವಾಯಿತಂತೆ. ಅಡುಗೆಯವರೊಬ್ಬರನ್ನು ಸಂಪರ್ಕಿಸಿದಾಗ, ಟೊಮ್ಯಾಟೊವನ್ನು ಫ್ರೂಟ್ ಸಲಾಡ್‌ನಲ್ಲಿ ಬಳಸುವುದಿಲ್ಲ. ಆದ್ದರಿಂದ ಅದು ತರಕಾರಿ ಎಂದರಂತೆ. ಇದು ಹಣ್ಣೇ ಎಂಬುದು ವರ್ತಕರ ವಾದವಂತೆ. ಪ್ರಕರಣ ಕೋರ್ಟ್‌ವರೆಗೂ ಹೋಗಿ 5 ವರ್ಷ ಎಳೆದಾಡಿ ಕೊನೆಗೆ ಇದು ತರಕಾರಿ ಎಂದು ತೀರ್ಮಾನಿಸಿದರಂತೆ!

ಬೆಲೆ ಏರಿದ್ದರಿಂದ ಸದ್ಯ ನಮ್ಮ ಮನೆಯಲ್ಲೂ ಟೊಮ್ಯಾಟೊ ಉಪಯೋಗಿಸುತ್ತಿಲ್ಲ.

—ಎನ್.ಡಿ. ವೆಂಕಟಸುಬ್ಬು, ಮೈಸೂರು

## ಮನಸೆಳೆದ ಮಾತು

‘ಪಿತನಾರು?’ (ಆ. 10, ಡಾ. ಪ್ರಭಾಕರ ಶಿಶಿಲ) ಕಥೆ ಚೆನ್ನಾಗಿ ಮೂಡಿಬಂದಿದೆ. ಕೊನೆಯಲ್ಲಿ, ‘ಜನನಕ್ಕೆ ಕಾರಣನಾಗಿ ಪೊರೆಯದವನು ಪಿತನಲ್ಲ, ತಂದೆಯ ಸ್ಥಾನ ತುಂಬಿ ಪೊರೆದವನು ಪಿತ’ ಎಂಬ ಮಾತು, ಆತನ ನಿರ್ಣಯ ಸರಿಯಾಗಿಯೇ ಇದೆ.

ನಿಜವಾದ ತಂದೆ ಯಾರು ಎಂಬ ಪರಿಕಲ್ಪನೆಯನ್ನು ಕಥೆಯಲ್ಲಿ ತುಂಬಾ ಚೆನ್ನಾಗಿ ತೆರೆದಿಡಲಾಗಿದೆ.

– ಪದ್ಮನಾಭ ಆರ್., ಗುರುನಾಥ ಸುತಾರ

## ಮುತುವರ್ಜಿ ತೋರಲಿ

‘ಮುಂಗಾರಿನ ಜೊತೆ ಮರಗಳ ಕಥೆ’ (ಆ. 10, ವಿನುಗಂಗೆ), ಹಸುರು ಅಭಿಯಾನಕ್ಕೆ ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ಬರಲೇಬೇಕಾದ ಅತ್ಯುತ್ತಮ ಲೇಖನ. ಕೆರೆ ಏರಿ ಮೇಲೆ ನೆಡಲಾಗುವ ಅಪರೂಪದ ಸಸಿಗಳ ಸಂವರ್ಧನೆಗಾಗಿ ಮಾಡಬೇಕಾದ ಸಂರಕ್ಷಣಾ ಕಾರ್ಯದ ಬಗ್ಗೆ ಅಧಿಕಾರಿಗಳು ಹೆಚ್ಚಿನ ಮುತುವರ್ಜಿ ತೋರುವಂತಾಗಲಿ.

—ಸುಭಾಷಿಣಿ ಹೆಚ್.ಎಂ., ಬೆಂಗಳೂರು

## ಅರಿವಿನ ಮಾಹಿತಿ

‘ಮರಗಳ ಕಥೆ’ ತುಂಬಾ ಇಷ್ಟವಾಯಿತು. ಲೇಖಕಿಯ ಪರಿಸರ ಕಾಳಜಿ ಮೆಚ್ಚುವಂತಹದ್ದು. ಅವರು ಪ್ರಸ್ತಾಪಿಸಿದ ವಿಷಯ, ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ಬಂದರೆ ಉತ್ತಮ.

—ಕಲಾ ಸತೀಶ್, ಬೆಂಗಳೂರು

## ಮಿಂಚುಹುಳುಗಳ ರಮ್ಯ ದೃಶ್ಯ!

‘ಮಿಂಚುತಿರು ಮಿಂಚುಹುಳು’ (ಆ. 10, ಸೀಮಾ ಹೆಗಡೆ) ಲೇಖನ, ಹಿಂದೆ ನಾನು ಕಂಡ ಅತಿ ಮನೋಹರ ದೃಶ್ಯದ ನೆನಪು ಮಾಡಿಸಿತು. ಆಗಿನ್ನೂ ಲಿಂಗನಮಕ್ಕಿ ಅಣೆಕಟ್ಟು ಕಟ್ಟಿರಲಿಲ್ಲ. ಈಗ ಮುಳುಗಡೆಯಾಗಿರುವ ಹಿರೇಭಾಸ್ಕರ ಅಣೆಕಟ್ಟು ಮಾತ್ರ ಇತ್ತು. ಅಲ್ಲೇ ಸಮೀಪದ ಅರಣ್ಯ ವಸತಿಗೃಹದಲ್ಲಿ ತಂಗಿದ್ದೆವು. ಕತ್ತಲಾದಾಗ, ಒಂದು ಸಣ್ಣ ಮರದ ತುಂಬಾ ಮಿಣುಕುಹುಳುಗಳು ಸೇರಿ ಸೃಷ್ಟಿಸಿದ ಮಾಯಾಲೋಕ ವರ್ಣಿಸಲಸಾಧ್ಯ. ಅದನ್ನೇ ನೋಡುತ್ತಾ ಕಾಲವನ್ನೇ ಮರೆತುನಿಂತಿದ್ದೆ!

—ಪ್ರೊ. ಎಸ್.ಆರ್. ದೇವಪ್ರಕಾಶ್, ತುಮಕೂರು

## ಮಾಯವಾದ ಬೆಳಕು



ನಮ್ಮ ಮನೆ ಸುತ್ತಮುತ್ತ ರಾತ್ರಿ ಮಿನುಗುತ್ತಾ ಹಾರಾಡುತ್ತಿದ್ದ ಮಿಂಚುಹುಳುಗಳನ್ನು ಗಂಟೆಗಟ್ಟಲೆ ನೋಡಿ ಮುದಗೊಳ್ಳುತ್ತಿದ್ದ ಕಾಲವೊಂದಿತ್ತು. ಈಗ ಮನೆಗಳು ಹೆಚ್ಚುತ್ತಿದ್ದಂತೆ ಮಿಂಚುಹುಳುಗಳ ಸಂಖ್ಯೆ ಇಳಿದುಹೋಗಿದೆ. ಆ ಸುಂದರ ದೃಶ್ಯವೂ ಮಾಯವಾಗಿದೆ.

—ಉಷಾ ಸೋಗಲ್, ತುರಹಳ್ಳಿ

## ನೆನಪಿನ್ನೂ ಹಸುರಾಗಿದೆ

ನಾ ಚಿಕ್ಕವನಿದ್ದಾಗ ಮೂಡುಬಿದಿರೆ ಸನಿಹ ಅರಸರ ಕಟ್ಟೆ ಎಂಬ ಗುಡ್ಡದ ಇಕ್ಕೆಲಗಳಲ್ಲಿ ನೆಟ್ಟ ಹತ್ತಾರು ಗಾಳಿ ಮರದಲ್ಲಿ ಮಳೆಗಾಲದಲ್ಲಿ ಮಿಂಚುಹುಳುಗಳು ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಸೇರಿ ಒಂದೇ ಬಾರಿ ಮಿನುಗತೊಡಗುವಾಗ ಕಂಡ ದೃಶ್ಯ ವರ್ಣಿಸಲಸದಳ! ರಾತ್ರಿ ಎಷ್ಟೋ ಹೊತ್ತು ಆ ದೃಶ್ಯವನ್ನು ಕಣ್ತುಂಬಿಕೊಂಡು ಮನೆಗೆ ಸೇರಿಕೊಳ್ಳುತ್ತಿದ್ದೆವು. ಆ ನೆನಪಿನ್ನೂ ಹಸುರಾಗಿ ಉಳಿದಿದೆ.

—ಪಿ. ವಾಸುದೇವ್ ಭಟ್, ಉಡುಪಿ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in